ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 70(111)
ಸದಸ್ಯರ ಹೆಸರು : ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 13-12-2021
ಉತ್ತರಿಸುವ ಸಚಿವರು : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವೃಂದ ಮತ್ತು ನೇಮಕಾತಿ ನಿಯಮಾವಳಿಗಳು 1983, 1998 ಮತ್ತು 2008ರ ನಿಯಮಾವಳಿಗಳ ಪ್ರಕಾರ ಒಟ್ಟು ಖಾಲಿ ಹುದ್ದೆಗಳಲ್ಲಿ ಬ್ಲಾಕ್ ವಾರು ವಿಷಯವಾರು ಶೇ 50 ರಷ್ಟು ನೇರ ನೇಮಕಾತಿ ಮತ್ತು ಶೇ.50 ರಷ್ಟು ಸ್ನಾತಕೋತ್ತರ ಪದವಿ ಪಡೆದ ಪ್ರೌಢ ಶಾಲಾ ಸಹಶಿಕ್ಷಕರಿಂದ ಬಡ್ತಿ ಮೂಲಕ ನೇಮಕಾತಿ ಮಾಡಲಾಗಿದೆಯೇ; (ಕೋಟ ರೂಲ್ ಅನುಸರಿಸಿರುವ ಬಗ್ಗೆ ಮಾಹಿತಿ ನೀಡುವುದು.	ಹೌದು. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.
ಆ)	ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಜೇಷ್ಠತಾ ಪಟ್ಟಿಯನ್ನು ತಯಾರಿಸುವಾಗ ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನಾ ಸಂ: ಸಿಆಸುಇ 43 ಸೇಕನಿ 87 ದಿ: 14-12-1987ರ ಆದೇಶ ಪಾಲಿಸಲಾಗಿದೆಯೇ; ಇಲ್ಲದಿದ್ದಲ್ಲಿ ಕಾರಣಗಳನ್ನು ತಿಳಿಸುವುದು.	ಹೌದು ಪಾಲಿಸಲಾಗಿದೆ. ಸರ್ಕಾರದ ಮಾರ್ಗಸೂಚಿ ಸಂಖ್ಯೆ: ಡಿಪಿಎಆರ್:43:ಎಸ್ಎಸ್ಆರ್:82 ದಿನಾಂಕ:14-12-1987ರನ್ವಯ ಬ್ಲಾಕ್‌ಗಳನ್ನು ವಿಂಗಡಿಸಿ, ಜೇಷ್ಠತಾ ಪಟ್ಟಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 750 ಡಿಪಿಐ 2001 ದಿನಾಂಕ:03-03-2003ರಲ್ಲಿ ಆದೇಶ ಹೊರಡಿಸಿದೆ. ತದನಂತರ ದಿನಾಂಕ:10-04-2008 ಹಾಗೂ ದಿನಾಂಕ:26-03-2011ರಂದು ಬ್ಲಾಕ್‌ಗಳನ್ನು ವಿಂಗಡಿಸಿ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ.
ಇ)	ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಜೇಷ್ಠತಾ ಪಟ್ಟಿಯನ್ನು ತಯಾರಿಸುವಾಗ ಕರ್ನಾಟಕ ಆಡಳಿತ ನ್ಯಾಯಮಂಡಳಿ ಅರ್ಜಿ ಸಂ:3738-3756/2009ರ ದಿ:27-09-2010ರ ತೀರ್ಪನ್ನು ಪಾಲಿಸಲಾಗಿದೆಯೇ;	ಹೌದು ಪಾಲಿಸಲಾಗಿದೆ. ಸರ್ಕಾರದ ಪತ್ರ ಸಂಖ್ಯೆ:ಇಡಿ 87 ಡಿಜಿಡಿ 2009 ದಿನಾಂಕ:23-08-2010 ಮತ್ತು ದಿನಾಂಕ:28-10-2011ರಲ್ಲಿ ನೀಡಿದ ನಿರ್ದೇಶನಗಳಂತೆ ದಿನಾಂಕ:24-10-1986 ರಿಂದ ದಿನಾಂಕ:30-04-1998ರ ಅವಧಿಯಲ್ಲಿನ ಉಪನ್ಯಾಸಕರ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಸದರಿ ಅವಧಿಯಲ್ಲಿ ನಿಯಮ-

		32ರಡಿಯಲ್ಲಿ ಕಾರ್ಯನಿರ್ವಹಿಸಿದ್ದ ಉಪನ್ಯಾಸಕರುಗಳಿಗೆ ನಿಯಮ-32ರಡಿ ಕಾರ್ಯನಿರ್ವಹಿಸಿದ ದಿನಾಂಕವನ್ನು ಪರಿಗಣಿಸಿ ಪೂರ್ವಾನ್ವಯ ಬಡ್ತಿ ನೀಡಿ ಜೇಷ್ಠತೆಗೆ ಪರಿಗಣಿಸಿ, ದಿನಾಂಕ:26-03-2011ರಲ್ಲಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿದೆ.
ಈ)	ಸರ್ಕಾರಿ ಪದವಿ ಪೂರ್ವ ಶಿಕ್ಷಣ ಇಲಾಖೆ ಪ್ರಕಟಿಸಿರುವ ಉಪನ್ಯಾಸಕರ ಜೇಷ್ಠತಾ ಪಟ್ಟಿಯಲ್ಲಿರುವ ಬಡ್ತಿ ಮತ್ತು ನೇರ ನೇಮಕಾತಿ ಹುದ್ದೆಗಳಲ್ಲಿ ವ್ಯತ್ಯಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ವ್ಯತ್ಯಾಸಕ್ಕೆ ಕಾರಣಗಳೇನು:	1. ದಿನಾಂಕ:24-10-1986 ರಿಂದ 30-04-1998ರ ವರೆಗಿನ ಅವಧಿಯಲ್ಲಿ ನೇರ ನೇಮಕಾತಿ ಹಾಗೂ ಬಡ್ತಿ ಹೊಂದಿದ ಉಪನ್ಯಾಸಕರುಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ಸರ್ಕಾರದ ಅಧಿಸೂಚನೆ ದಿನಾಂಕ:03-03-2003ರಲ್ಲಿ ಪ್ರಕಟಿಸಲಾಗಿತ್ತು. ಸದರಿ ಜೇಷ್ಠತಾ ಪಟ್ಟಿಯಲ್ಲಿ ನ್ಯೂನತೆ ಇದ್ದ ಕಾರಣ, ಸದರಿ ಜೇಷ್ಠತಾ ಪಟ್ಟಿಯನ್ನು ದಿನಾಂಕ: 12-12-2006ರ ಅಧಿಸೂಚನೆಯಲ್ಲಿ ತಿದ್ದುಪಡಿಗೊಳಿಸಿ ಪ್ರಕಟಿಸಲಾಗಿದೆ. 2. ದಿನಾಂಕ:12-12-2006ರಲ್ಲಿ ಪ್ರಕಟಿಸಲಾಗಿದ್ದ ಜೇಷ್ಠತಾ ಪಟ್ಟಿಗೆ ಕೆ.ಎ.ಟಿ. ಅರ್ಜಿ ಸಂಖ್ಯೆ:2094-2101/2007ಕ್ಕೆ ದಿನಾಂಕ:03-12-2007ರ ತೀರ್ಪಿನನ್ವಯ ದಿನಾಂಕ:10-04-2008ರಂದು ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ. 3. ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 87 ಡಿಜಿಡಿ 2009, ದಿನಾಂಕ:23-08-2010ರಂತೆ ನೇರ ನೇಮಕಾತಿ ಮತ್ತು ಬಡ್ತಿ ಹೊಂದಿದ ಉಪನ್ಯಾಸಕರುಗಳ ಅಂದರೆ ನಿಯಮ-32ರಡಿ ಕಾರ್ಯ ನಿರ್ವಹಿಸಿದ ದಿನಾಂಕವನ್ನು ಪರಿಗಣಿಸಿ, ಅರ್ಹತಾ ದಿನಾಂಕವೆಂದು ನಿಗದಿಪಡಿಸಿ, ಅಂತಿಮ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ದಿ:26-03-2011ರಂದು ಪ್ರಕಟಿಸಿದೆ. 4. ಈ ಮೂಲಕ ಕಾಲಕಾಲಕ್ಕೆ ಹೊರಡಿಸಲಾಗಿರುವ ಜೇಷ್ಠತಾ ಪಟ್ಟಿಗಳಿಗೆ ಬಂದಂತಹ ಆಕ್ಷೇಪಣೆ, ನ್ಯೂನತೆಗಳನ್ನು ಸರಿಪಡಿಸಿ ಪ್ರಕಟಿಸಲಾಗಿದೆ.
ಉ)	ಉಪನ್ಯಾಸಕರ ಜೇಷ್ಠತಾ ಪಟ್ಟಿಯನ್ನು ತಯಾರಿಸುವಾಗ ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮ/ಆದೇಶ ಹಾಗೂ ನ್ಯಾಯಾಲಯದ ತೀರ್ಪನ್ನು ಪಾಲಿಸಲಾಗಿದೆಯೇ; (ಮಾಹಿತಿ ನೀಡುವುದು)	ಉಪನ್ಯಾಸಕರ ಜೇಷ್ಠತಾ ಪಟ್ಟಿಗೆ ಬಂದಂತಹ ನ್ಯಾಯಾಲಯದ ಆದೇಶ ಪಾಲಿಸಲಾಗಿದೆ ಹಾಗೂ ಕಾಲಕಾಲಕ್ಕೆ ಉಪನ್ಯಾಸಕರ ಜೇಷ್ಠತಾ ಪಟ್ಟಿ ತಯಾರಿಸುವಾಗ ಚಾಲ್ತಿಯಲ್ಲಿದ್ದ ನಿಯಮ/ಸೂಚನೆ ಹಾಗೂ ಆದೇಶಗಳನ್ನು ಪಾಲಿಸಿ ಪ್ರಕಟಿಸಲಾಗಿದೆ. ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು, 1957ರ ನಿಯಮಗಳಡಿಯಲ್ಲಿ ನಿಗದಿಪಡಿಸಿದ ಮಾನದಂಡಗಳನ್ನು ಅನುಸರಿಸಿ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಊ)	ಉಪನ್ಯಾಸಕರ ಜೇಷ್ಠತಾ ಪಟ್ಟಿಯಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸಲು ಸಾಧ್ಯವಿದೆಯೇ; ಸರಿಪಡಿಸಲು ಬೇಕಾಗಿರುವ ಸಮಯವೆಷ್ಟು;	ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ:2368/2011ರ ಶ್ರೀ ಬಿ.ಕೆ. ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು ಮತ್ತು ಸಂಬಂಧಿಸಿದ ಮರುಪರಿಶೀಲನಾ ಅರ್ಜಿ ಹಾಗೂ ರಿಟ್ ಅರ್ಜಿಗಳಲ್ಲಿನ ಪ್ರಕರಣ ಎಂ.ಎ. ಸಂಖ್ಯೆ:1151/2018ರಲ್ಲಿನ ದಿನಾಂಕ:10-05-2019ರ ತೀರ್ಪಿನಂತೆ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 186 ಎಸ್‌ಆರ್‌ಎಸ್ 2018, ದಿನಾಂಕ: 27-02-2019 ಹಾಗೂ 15-05-2019ರಲ್ಲಿನ ನಿರ್ದೇಶನಗಳನ್ವಯ 1974 ರಿಂದ 1986 ಹಾಗೂ 1986 ರಿಂದ 1998ರ ವರೆಗೆ ನೇರ ನೇಮಕಾತಿ ಹಾಗೂ ಬಡ್ತಿ ಮೂಲಕ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ:25-06-2019ರಂದು ಪ್ರಕಟಿಸಲಾಗಿತ್ತು. ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಬಂದಂತಹ ಆಕ್ಷೇಪಣೆಗಳನ್ನು ಪರಿಶೀಲಿಸಿ, ಪರಿಗಣಿಸಿ ದಿನಾಂಕ:05-09-2019ರಂದು ಅಂತಿಮ ಜೇಷ್ಠತಾ ಪಟ್ಟಿಯನ್ನು ನಿಯಮಾನುಸಾರ ಪ್ರಕಟಿಸಲಾಗಿದೆ. 1998ರಲ್ಲಿ ನೇರ ನೇಮಕಾತಿಯಾದ ಉಪನ್ಯಾಸಕರುಗಳು ಹಾಗೂ ಸಹಶಿಕ್ಷಕ ಹುದ್ದೆಯಿಂದ ಉಪನ್ಯಾಸಕರುಗಳಾಗಿ ಬಡ್ತಿ ಹೊಂದಿದ ಉಪನ್ಯಾಸಕರುಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ:04-10-2021ರಂದು ಪ್ರಕಟಿಸಿ, ದಿನಾಂಕ:04-11-2021ರ ವರೆಗೆ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿದೆ. ಸದರಿ ಆಕ್ಷೇಪಣೆಗಳನ್ನು ನಿಯಮನುಸಾರ ಪರಿಶೀಲಿಸುವ ಸಲುವಾಗಿ ಸಮಿತಿಯನ್ನು ರಚಿಸಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತು ಅಗತ್ಯ ಕ್ರಮವನ್ನು ಕೈಗೊಳ್ಳಲಾಗುವುದು.
ಋ)	ಪದವಿ ಪೂರ್ವ ಶಿಕ್ಷಣ ಮಂಡಳಿಯವರು ನಿಯಮಾನುಸಾರ ಉಪನ್ಯಾಸಕರ ಜೇಷ್ಠತಾ ಪಟ್ಟಿ ತಯಾರಿಸಲು ಸಾಧ್ಯವಿಲ್ಲದಿರುವುದರಿಂದ ಸರ್ಕಾರ ಸಮಿತಿ ರಚಿಸಿ ನಿಯಮಾನುಸಾರ ಉಪನ್ಯಾಸಕರ ಜೇಷ್ಠತಾ ಪಟ್ಟಿ ತಯಾರಿಸಲು ಸಾಧ್ಯವಿದೆಯೇ; ಹಾಗಿದ್ದಲ್ಲಿ ಸರ್ಕಾರ ಕ್ರಮ ಕೈಗೊಳ್ಳುವುದೇ?	ಉಪನ್ಯಾಸಕರ ವೃಂದದ ಹುದ್ದೆಗಳ ನೇಮಕಾತಿ ಪ್ರಾಧಿಕಾರವು ಪದವಿ ಪೂರ್ವ ಶಿಕ್ಷಣ ನಿರ್ದೇಶಕರಾಗಿರುತ್ತಾರೆ. ಆದ್ದರಿಂದ, ಇಲಾಖಾ ಹಂತದಲ್ಲಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತು ಸಮಿತಿಯನ್ನು ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಇಡಿ 190 ಡಿಜಿಡಬ್ಲ್ಯೂ 2021

(ಬಿ.ಸಿ. ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಕಾಲ ಸಚಿವರು ಸಚಿವರು